
ಮನೆಯಲ್ಲಿ ವಾಸ ಆರಂಭಿಸಿದ್ದರು. ಅವರನ್ನು ಭೇಟಿಯಾದ ಬಗ್ಗೆ 'ಪ್ರಜಾವಾಣಿ'ಯಲ್ಲಿ ಲೇಖನ ಬರೆದಾಗ, ಅನೇಕ ಲೇಖಕರು ಅವರಿರುವ ಬಗ್ಗೆ ಸೋಜಿಗ ವ್ಯಕ್ತಪಡಿಸಿದ್ದರು. ಹೀಗೆ ಕೃತಿಗಳ ರೂಪದಲ್ಲಿ ಓದುಗರಿಗೆ ಮಸುಕಾಗಿ ನೆನಪಿದ್ದ, ಆದರೆ ಸಾರ್ವಜನಿಕ ಸ್ಮೃತಿಯಿಂದ ಮರೆವಿಗೆ ಸಂದಿದ್ದ ಮತ್ತೊಬ್ಬ ನವ್ಯ ಲೇಖಕರೆಂದರೆ, ಕುಸುಮಾಕರ ದೇವರಗೆಣ್ಣೂರು. ಅವರ ಸಂದರ್ಶನ ಪ್ರಕಟವಾದಾಗಲೂ ಇದೇ ಪರಿಯ ಸೋಜಿಗ ವ್ಯಕ್ತವಾಗಿತ್ತು. ಆದರೆ ಪ್ರಭಾಕರ್, ಕನ್ನಡದ ಹೊಸತಲೆಮಾರಿನ ಅನೇಕ ಲೇಖಕರು, ಪತ್ರಕರ್ತರ ಜತೆ ಗೆಳೆತನ ಸಾಧಿಸಿದರು. ಅವರ ಜತೆ ಹರಟುತ್ತ, ಕುಡಿಯುತ್ತ ತಮ್ಮ ಮುಪ್ಪನ್ನು ಮರೆಯಲು, ತಮ್ಮ ಚಿಂತನೆ ಹಂಚಿಕೊಳ್ಳಲು ಯತ್ನಿಸಿದರು. ಅವರು ಅಜ್ಞಾತವಾಸ ಇಷ್ಟಪಡುತ್ತಿದ್ದರೂ, ಆಪ್ತರಾದವರ ಭೇಟಿಗೆ ಹಪಹಪಿಸುತ್ತಿದ್ದರು. ತಮಗೆ ಪ್ರಿಯವಾದ ಸಂಗತಿ ಬಂದಾಗ ಉತ್ಕಟವಾದ ಉತ್ಸಾಹದಿಂದ ವಿವರಿಸುತ್ತಿದ್ದರು. ನಡುವೆಯೇ ಅಂತರ್ಮುಖಿಗಳಾಗುತ್ತಿದ್ದರು. ಸಿಡುಕುತ್ತಿದ್ದರು. ಹಟಮಾರಿ ಮಗುವಿನಂತಿದ್ದರು. ಬಹುಕಾಲ ಬೇರೊಂದೆಡೆ ಬೇರುಬಿಟ್ಟಿದ್ದ ಮರವನ್ನು ಕಿತ್ತು ಇನ್ನೊಂದೆಡೆ ನಾಟಿ ಹಾಕಿದಾಗ ಅದು ನೆಲದೊಡನೆ ಸಂಬಂಧ ಬೆಸೆದುಕೊಳ್ಳಲು ಮಾಡುವ ಹೋರಾಟಗಳು ಅನೂಹ್ಯವಾದವು.

ಪ್ರಭಾಕರ ಅವರ ಕಾಲು ಊನವಾಗಿದ್ದರೂ ಲೋಕವನ್ನೆಲ್ಲ ತಿರುಗಾಟ ಮಾಡಿದರು. ಅದು ತನ್ನನ್ನು ಅಂಗವಿಕಲಗೊಳಿಸಿದ ಪೋಲಿಯೊಗೆ ಮತ್ತು ಕುಂಟನೆಂದು ಕರೆದ ಸಮಾಜಕ್ಕೆ ಕೊಟ್ಟ ಉತ್ತರದಂತಿತ್ತು. ಅಂಗವಿಕಲತೆಗೆ ಸೌಮ್ಯಶಬ್ದಗಳನ್ನು ಬಳಸುವ ನಾಗರಿಕ ಸಮಾಜದ ಮೇಲಿನ ಕೋಪದಲ್ಲಿ, ಅವರಿಗೆ ಸಹಾನುಭೂತಿ ನಿರಾಕರಿಸುವ ಛಲವಿತ್ತು. ನನಗೆ ಮಾತ್ರ ಹೀಗಾಯಿತಲ್ಲ ಎಂಬ ಆಕ್ರೋಶವೂ ಇತ್ತು. ಈ ದೈಹಿಕ ಅವಸ್ಥೆಯನ್ನು ಮೀರಲೆಂದೇ ಅವರು ತಿರುಗುತ್ತಿದ್ದರು. ಯಾವ ದೇಹ ಅವರ ಲೋಕತಿರುಗಾಟಕ್ಕೆ ಮಾಧ್ಯಮವಾಗಿತ್ತೋ, ಅದುವೇ ಕೊನೆಯದಿನಗಳಲ್ಲಿ ವೇದನೆ ಹುಟ್ಟಿಸುವ ಒಜ್ಜೆಯಾಯಿತು. ತಾವು ಜಾರಿಬೀಳಬಹುದು ಎಂದು ಪಡುತ್ತಿದ್ದ ಆತಂಕ ನಿಜವಾಯಿತು. ಇದ್ದೊಂದು



ಕಾಲು ಮುರಿದ ಬಳಿಕ, ಪರಿಸ್ಥಿತಿ ಅವರನ್ನು ಕುರ್ಚಿಗೆ, ಮಂಚಕ್ಕೆ ಕಟ್ಟಿಹಾಕಿತು. ಬಳಿಕ ಉಪಚಾರಕ್ಕೆಂದು ಒಂದು ಕೆಲಸಗಾರ ಕುಟುಂಬವೇ ಬಂದು ಅವರೊಟ್ಟಿಗೆ ನೆಲೆಸಿತು. ಅವರ ಏಕಾಂತಪ್ರಿಯತೆಗೆ ವಿರುದ್ಧವಾಗಿ ಮನೆ ತುಂಬಿಹೋಯಿತು. ಓದು–ಚಿಂತನೆಗೆ ಅವರಿಗದು ಕಿರಿಕಿರಿಯೂ ಆಗುತ್ತಿತ್ತು. ಅದು, ಮದುವೆಯಾಗದ ಮಕ್ಕಳಿಲ್ಲದ, ಅವರಿಗೆ ಬದುಕು ವಿಧಿಸಿದ ಸಜೆಯಂತಿತ್ತು. ಸಾವು, ಅವರನ್ನು ಅಪಾರವಾದ ವೇದನೆಗಳಿಂದ ಬಿಡುಗಡೆ ಮಾಡುವ ಪರಿಹಾರವೂ ಆಯಿತು. ಅವರು ಕುವೆಂಪು ಜನ್ಮದಿನದಂದು ದೇಹಬಿಟ್ಟರು. ತಮ್ಮ ದೇಹ ಧಾರ್ಮಿಕ ಆಚರಣೆಗಳಿಲ್ಲದೆ ವಿಲೇವಾರಿ ಆಗಬೇಕೆಂದು ಹೇಳಿದ್ದರು. ಅದು ವೈದ್ಯಕೀಯ ವಿದ್ಯಾರ್ಥಿಗಳಿಗೆ ದೇಹಶಾಸ್ತ್ರದ ಮೇಲೆ ಹೊಸ ತಿಳಿವಳಿಕೆ ಪಡೆಯಲು ವಸ್ತುವಾಗಿ ಪರ್ಯವಸಾನಗೊಂಡಿತು.

●